2017 ಕ.ತೀ.ವ. 218

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಡಾ|| ವಿನೀತ್ ಕೊಠಾರಿ

## ಅಲ್ಸ್‌ಸ್ಟಾಮ್ ಪ್ರಾಜೆಕ್ಟ್ಸ್ ಇಂಡಿಯಾ ಲಿ. –ವಿರುದ್ಧ– ಕರ್ನಾಟಕ ಸರ್ಕಾರ ಮತ್ತು ಇತರರು *

**ಕೈಗಾರಿಕಾ ವ್ಯಾಜ್ಯಗಳ ಕಾಯಿದೆ, 1947 ಸೆಕ್ಷನ್ 2ಎ**

**ಪ್ರಸ್ತುತ ಪ್ರಕರಣದಲ್ಲಿ ಕಾರ್ಮಿಕನನ್ನು ಕಡ್ಡಾಯ ನಿವೃತ್ತಿ ಅಥವಾ ತೆಗೆದು ಹಾಕುವಿಕೆಯನ್ನು ಮಾಡಿದ ಸಂದರ್ಭದಲ್ಲಿ ಕಾರ್ಮಿಕ ನ್ಯಾಯಾಲಯಕ್ಕೆ ಹೋಗುವ ಮುಂಚೆ ಅಧಿಕಾರಿಯ ಬಳಿ ಪ್ರಕರಣವನ್ನು ನೇತ್ಯಾತ್ಮಕ ಪರಿಹಾರಕ್ಕೆ ಕಳುಹಿಸಲೇಬೇಕೆಂಬ ಕಡ್ಡಾಯ ಮತ್ತು ಕಂಪನಿಯ ಆಡಳಿತ ವರ್ಗಕ್ಕೆ ಕಾರ್ಮಿಕ ವ್ಯಾಜ್ಯ ಕರ್ನಾಟಕ ನಿಯಮಗಳು 1957ರ ನಿಯಮ 10ರ ಅಡಿ ನೋಟೀಸ್ ನೀಡಲೇಬೇಕೆಂಬ ಕಡ್ಡಾಯ ಇರುವುದಿಲ್ಲ. ಆಡಳಿತ ವರ್ಗವು ತನ್ನ ಪ್ರಕರಣವನ್ನು ಕಾರ್ಮಿಕ ನ್ಯಾಯಾಲಯದ ಮುಂದೆ ಸೂಕ್ತವಾಗಿ ರಕ್ಷಿಸಿಕೊಳ್ಳಬಹುದು ಎಂದು ನಿರ್ಧರಿಸಿ ಮಾನ್ಯ ಉಚ್ಚ ನ್ಯಾಯಾಲಯವು ತೀರ್ಪನ್ನು ನೀಡಿದೆ.**

ಅರ್ಜಿದಾರರ ಪರ : ಶ್ರೀ ಅಶೋಕ್ ಎಸ್. ಕಿಣಗಿ, ವಕೀಲರು ;
1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀ ಎ. ಸೈಯದ್ ಹಬೀಬ್, ಎಜಿಎ.
3ನೇ ಪ್ರತ್ಯರ್ಜಿದಾರರ ಪರ : ಶ್ರೀ ಪಿ. ವಿಲಾಸ್‌ಕುಮಾರ್, ವಕೀಲರು.

* ರಿಟ್ ಅರ್ಜಿ ಸಂಖ್ಯೆ: 81407/2012 (ಎಲ್–ಆರ್‌ಇಎಫ್), ದಿನಾಂಕ: 2ನೇ ಆಗಸ್ಟ್, 2016.

## ಆಜ್ಞೆ

**ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ :**

2010ರ ಅಧಿನಿಯಮ ಸಂಖ್ಯೆ. 24ರ ಮೂಲಕ ಅದರಲ್ಲಿ ಸೇರ್ಪಡೆಯಾಗಿರುವ 2ಎ ಪ್ರಕರಣದ ಮೂಲಕ ಕೈಗಾರಿಕಾ ವಿವಾದಗಳು ಅಧಿನಿಯಮ, 1947ರ ತಿದ್ದುಪಡಿಯ ಹಿನ್ನೆಲೆಯಲ್ಲಿ, ಪ್ರತ್ಯರ್ಜಿದಾರ – ಕಾರ್ಮಿಕ ಗುರುದತ್ತ ಇವರು, 01.06.2010ರಿಂದ ಜಾರಿಗೆ ಬಂದಿರುವ ತಮ್ಮ ವಜಾಕ್ಕೆ ಸಂಬಂಧಿಸಿದ ವಿಷಯವನ್ನು ಕಾರ್ಮಿಕ ನ್ಯಾಯಾಲಯದ ಮುಂದೆ ಎತ್ತಿರುತ್ತಾರೆಂದು ಅಭಿಪ್ರಾಯಪಟ್ಟು ಕಾರ್ಮಿಕ ಉಪ–ಆಯುಕ್ತರು ಹಾಗೂ ಸಂಧಾನಾಧಿಕಾರಿ, ಗುಲ್ಬರ್ಗಾ ಇವರು ಹೊರಡಿಸಿದ 17.01.2012ರಲ್ಲಿನ ಅನುಬಂಧ – ಬಿ ಯ ಪ್ರಶ್ನಿತ ಹಿಂಬರಹದಿಂದ ಉದ್ಯೋಗದಾತ ಅಲ್‌ಸ್ಟಾಮ್ ಪ್ರಾಜೆಕ್ಟ್ಸ್ ಇಂಡಿಯಾ ಲಿ. ಬಾಧಿತಗೊಂಡು ಈ ಅರ್ಜಿಯನ್ನು ಸಲ್ಲಿಸಿದೆ.

2. ಉದ್ಯೋಗದಾತ ಕಂಪನಿಯ ಪರ ಮಾನ್ಯ ವಕೀಲರು, ಈ ಮುಂದೆ ಉದ್ಧರಿಸಿರುವ, ಕೈಗಾರಿಕಾ ವಿವಾದಗಳ (ಕರ್ನಾಟಕ) ನಿಯಮಗಳು, 1957ರ 10ನೇ ನಿಯಮವನ್ನು ಉಲ್ಲೇಖಿಸಿ, ಉದ್ಯೋಗದಾತ ಹಾಗೂ ಪಕ್ಷಕಾರರಿಗೆ ಔಪಚಾರಿಕವಾಗಿ ವಿಷಯವನ್ನು ತಿಳಿಸದೆ ಸಂಧಾನಾಧಿಕಾರಿಯು ವಿಷಯವನ್ನು ಕಾರ್ಮಿಕ ನ್ಯಾಯಾಲಯಕ್ಕೆ ಉಲ್ಲೇಖಿಸುವಂತಿಲ್ಲ. ಆದರೆ ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರ – ಉದ್ಯೋಗದಾತನಿಗೆ ಯಾವುದೇ ಪೂರ್ವ ಮಾಹಿತಿಯನ್ನು ನೀಡದೆ 17.01.2012ರ ಪ್ರಶ್ನಿತ ಆದೇಶ ಅನುಬಂಧ – ಬಿಯನ್ನು ಹೊರಡಿಸಲಾಗಿರುತ್ತದೆಂದು ವಾದಿಸಿರುತ್ತಾರೆ. ಅಲ್ಲದೆ, ಈ ಹಿನ್ನೆಲೆಯಲ್ಲಿ ಉದ್ಯೋಗದಾತ – ಅರ್ಜಿದಾರ ಸಂಸ್ಥೆಗೆ ಸಂಧಾನಾಧಿಕಾರಿಯ ಬಳಿ ಈ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ವಾದವನ್ನು ಮಂಡಿಸಲು ಅವಕಾಶವನ್ನು ನಿರಾಕರಿಸಿರುತ್ತದೆ. ಆದ್ದರಿಂದ 17.01.2012ನೇ ದಿನಾಂಕದ ಪ್ರಶ್ನಿತ ಹಿಂಬರಹ ಅನುಬಂಧ – ಬಿ ಯನ್ನು ಈ ನ್ಯಾಯಾಲಯವು ರದ್ದುಪಡಿಸಬೇಕೆಂಬ ವಾದವನ್ನು ಸಹ ಮಂಡಿಸಿರುತ್ತಾರೆ.

> *"10. **ಸಾರ್ವಜನಿಕೇತರ ಉಪಯುಕ್ತತಾ ಸೇವೆಯಲ್ಲಿ ಸಂಧಾನ ನಡಾವಳಿ.**– ಸಂಧಾನಾಧಿಕಾರಿಯು, ಸಾರ್ವಜನಿಕ ಉಪಯುಕ್ತತಾ ಸೇವೆಗೆ ಸಂಬಂಧಿಸಿದಂಥ ಪ್ರಸ್ತುತ ಅಥವಾ ನಿರೀಕ್ಷಿತ ಕೈಗಾರಿಕಾ ವಿವಾದವನ್ನು ಕುರಿತಂತೆ ಯಾವುದೇ ಮಾಹಿತಿಯನ್ನು ಸ್ವೀಕರಿಸಿರುವೆಡೆಯಲ್ಲಿ ಹಾಗೂ ಇವರು ಯುಕ್ತವೆಂದು ಭಾವಿಸಬಹುದಾದಂಥ ಸ್ಥಳ ಹಾಗೂ ಕಾಲದಲ್ಲಿ, ವಿವಾದದಲ್ಲಿ ಮಧ್ಯೆ ಪ್ರವೇಶಿಸುವ ಅವಶ್ಯಕತೆಯಿದೆಯೆಂದು ಪರಿಗಣಿಸಿದಲ್ಲಿ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಸಂಧಾನ ನಡಾವಳಿಯನ್ನು ಆರಂಭಿಸುವ ತಮ್ಮ ಉದ್ದೇಶವನ್ನು ಘೋಷಿಸಿ ಸಂಬಂಧಪಟ್ಟ ಪಕ್ಷಕಾರರಿಗೆ ಲಿಖಿತದಲ್ಲಿ ಔಪಚಾರಿಕ ಮಾಹಿತಿಯನ್ನು ನೀಡತಕ್ಕದ್ದು".*

3. ಮತ್ತೊಂದು ಕಡೆ, ಕಾರ್ಮಿಕನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಕೈಗಾರಿಕಾ ವಿವಾದಗಳ ಅಧಿನಿಯಮ 1947ರ ತಿದ್ದುಪಡಿ ಮಾಡಲಾದ 2ಎ ಪ್ರಕರಣದ ಹಿನ್ನೆಲೆಯಲ್ಲಿ ಯಾರೇ ಉದ್ಯೋಗದಾತನು ಕಾರ್ಮಿಕನನ್ನು ಕಾರ್ಯ ನಿರ್ವಹಣೆಯಿಂದ ಬಿಡುಗಡೆ ಮಾಡಿದ್ದರೆ ಉದ್ಯೋಗದಿಂದ ತೆಗೆದು ಹಾಕಿದ್ದರೆ, ಪದಚ್ಯುತಿಗೊಳಿಸಿದ್ದರೆ ಅಥವಾ ವಜಾಗೊಳಿಸಿದ್ದರೆ ಕಾರ್ಮಿಕ ಹಾಗೂ ಉದ್ಯೋಗದಾತನ ನಡುವೆ ಪ್ರತ್ಯೇಕವಾಗಿ ಒಬ್ಬನೇ ಕಾರ್ಮಿಕನನ್ನು ಕಾರ್ಯ ನಿರ್ವಹಣೆಯಿಂದ ಬಿಡುಗಡೆಗೊಳಿಸುವುದು, ಉದ್ಯೋಗದಿಂದ ತೆಗೆದು ಹಾಕುವುದು, ಪದಚ್ಯುತಿಗೊಳಿಸುವುದು ಅಥವಾ ವಜಾಗೊಳಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದ ಅಥವಾ ಭಿನ್ನಾಭಿಪ್ರಾಯವಿದ್ದಲ್ಲಿ ಅವುಗಳನ್ನು ಕಾರ್ಮಿಕ ನ್ಯಾಯಾಲಯಕ್ಕೆ ಉಲ್ಲೇಖಿಸುವ ಅಗತ್ಯವಿರುವ ಕೈಗಾರಿಕಾ ವಿವಾದವೆಂದು ಭಾವಿಸತಕ್ಕದ್ದು. ಹಾಗಾಗಿ ಅಂಥ ಪ್ರಕರಣಗಳಲ್ಲಿ ಸಂಧಾನ ನಡಾವಳಿಗಳನ್ನು ಕುರಿತಂತೆ ಕಡ್ಡಾಯವಾಗಿ ನೋಟೀಸು ನೀಡಬೇಕಾದ ಅಗತ್ಯವಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದ್ದರಿಂದ ಕಾರ್ಮಿಕ ನ್ಯಾಯಾಲಯಕ್ಕೆ ವಿವಾದವನ್ನು ಉಲ್ಲೇಖಿಸುವ ಅವಕಾಶವಿರದಂಥ

ಪೂರ್ವ ಹಂತವಾಗಿರುವಂಥ ಸಂಧಾನದ ಹಂತದಲ್ಲಿ ಉದ್ಯೋಗದಾತ ಕಂಪನಿಯು ಪ್ರಸ್ತುತ ಹಂತದಲ್ಲಿ ಸ್ವಾಭಾವಿಕ ನ್ಯಾಯದ ತತ್ವಗಳ ಉಲ್ಲಂಘನೆಯಾಗಿದೆಯೆಂದು ಆಪಾದಿಸಿ, ಮಾನ್ಯ ಕಾರ್ಮಿಕ ಉಪ ಆಯುಕ್ತರೇ ಕಾರ್ಮಿಕ ನ್ಯಾಯಾಲಯಕ್ಕೆ ಹೋಗಲು ನಿರ್ದೇಶಿಸಿದ್ದು, ಕಾರ್ಮಿಕ ನ್ಯಾಯಾಲಯದಲ್ಲಿ ತನ್ನ ವಾದವನ್ನು ಪ್ರತಿಪಾದಿಸಲು ಸಂಪೂರ್ಣ ಅವಕಾಶವನ್ನು ಎಂದಿನಂತೆ ಉದ್ಯೋಗದಾತ ಕಂಪನಿಯು ಹೊಂದಿರುವುದರಿಂದ, ಮೇಲಿನ ಆಧಾರಗಳ ಹಿನ್ನೆಲೆಯಲ್ಲಿ ಉದ್ಯೋಗದಾತ ಕಂಪನಿಯು ಇದನ್ನು ಪ್ರಶ್ನಿಸುವಂತಿರುವುದಿಲ್ಲ.

4. ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ 2ಎ ಪ್ರಕರಣದ ಉಪಬಂಧವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

> *"[1][2ಎ. ಒಬ್ಬ ಕಾರ್ಮಿಕನ ವಜಾ ಮುಂತಾದವುಗಳ ಕೈಗಾರಿಕಾ ವಿವಾದವಾಗಿರಬೇಕೆಂದು ಭಾವಿಸಬೇಕು.*
>
> *[2][(1)] ಯಾರೇ ಇತರ ಕಾರ್ಮಿಕ ಇಲ್ಲವೇ ಯಾವುದೇ ಕಾರ್ಮಿಕ ಸಂಘಟನೆಯು ವಿವಾದಕ್ಕೆ ಪಕ್ಷಕಾರನಾಗಿದ್ದರೂ ಯಾರೇ ಉದ್ಯೋಗದಾತನು ಕಾರ್ಮಿಕನನ್ನು ಕಾರ್ಯ ನಿರ್ವಹಣೆಯಿಂದ ಬಿಡುಗಡೆ ಮಾಡಿದ್ದರೆ ಉದ್ಯೋಗದಿಂದ ತೆಗೆದು ಹಾಕಿದ್ದರೆ, ಪದಚ್ಯುತಿಗೊಳಿಸಿದ್ದರೆ ಅಥವಾ ವಜಾಗೊಳಿಸಿದ್ದರೆ ಕಾರ್ಮಿಕ ಹಾಗೂ ಉದ್ಯೋಗದಾತನ ನಡುವೆ ಪ್ರತ್ಯೇಕವಾಗಿ ಒಬ್ಬನೇ ಕಾರ್ಮಿಕನನ್ನು ಕಾರ್ಯ ನಿರ್ವಹಣೆಯಿಂದ ಬಿಡುಗಡೆಗೊಳಿಸುವುದು, ಉದ್ಯೋಗದಿಂದ ತೆಗೆದು ಹಾಕುವುದು, ಪದಚ್ಯುತಿಗೊಳಿಸುವುದು ಅಥವಾ ವಜಾಗೊಳಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದ ಅಥವಾ ಭಿನ್ನಾಭಿಪ್ರಾಯವಿದ್ದಲ್ಲಿ ಅವುಗಳನ್ನು ಕಾರ್ಮಿಕ*

*ನ್ಯಾಯಾಲಯಕ್ಕೆ ಉಲ್ಲೇಖಿಸುವ ಅಗತ್ಯವಿರುವ ಕೈಗಾರಿಕಾ ವಿವಾದವೆಂದು ಭಾವಿಸತಕ್ಕದ್ದು."*

[1]*[(2) 10ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ಅಂಥ ಕಾರ್ಮಿಕನು (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂತೆ ವಿವಾದ ಸಂಧಾನಕ್ಕೆ ಸಂಬಂಧಿಸಿದಂತೆ ಸಮುಚಿತ ಸರ್ಕಾರದ ಸಂಧಾನಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ನಲವತ್ತೈದು ದಿನಗಳು ಮೀರಿದ ತರುವಾಯ ಅದರಲ್ಲಿ ಉಲ್ಲೇಖಿಸಿದ ವಿವಾದದ ನ್ಯಾಯ ನಿರ್ಣಯಕ್ಕೆ ಸಂಬಂಧಿಸಿದಂತೆ ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣಕ್ಕೆ ನೇರವಾಗಿ ಅರ್ಜಿ ಸಲ್ಲಿಸಬಹುದು ಹಾಗೂ ಅಂಥ ಅರ್ಜಿಯನ್ನು ಸ್ವೀಕರಿಸಿದಲ್ಲಿ, ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಸಮುಚಿತ ಸರ್ಕಾರವು ಇದಕ್ಕೆ ವಿವಾದವನ್ನು ಉಲ್ಲೇಖಿಸಿದಲ್ಲಿ ವಿವಾದದ ಮೇಲೆ ನ್ಯಾಯ ನಿರ್ಣಯ ಕೈಗೊಳ್ಳುವ ಅಧಿಕಾರ ಹಾಗೂ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಎಲ್ಲಾ ಉಪಬಂಧಗಳು, ಸಮುಚಿತ ಸರ್ಕಾರವು ಇದಕ್ಕೆ ಉಲ್ಲೇಖಿಸಿದ ಕೈಗಾರಿಕಾ ವಿವಾದದ ಸಂಬಂಧದಲ್ಲಿ ಅವು ಅನ್ವಯವಾಗುವಂತೆ ಅಂಥ ನ್ಯಾಯನಿರ್ಣಯದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.]*

[1][(3) (2)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಅರ್ಜಿಯನ್ನು (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಸೇವೆಯಿಂದ ಬಿಡುಗಡೆಗೊಳಿಸಿದ,

ಉದ್ಯೋಗದಿಂದ ತೆಗೆದು ಹಾಕಿದ ಪದಚ್ಯುತಿಗೊಳಿಸಿದ ಅಥವಾ ವಜಾಗೊಳಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿ ಮುಕ್ತಾಯವಾಗುವುದಕ್ಕೆ ಮೊದಲು ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕದ್ದು]."

([2010ರ 24ನೇ ಅಧಿನಿಯಮದ ಮೂಲಕ ಅದರ 3ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿರುವಂತೆ 2ಎ ಪ್ರಕರಣವೆಂದು ಸಂಖ್ಯೆಯನ್ನು ನೀಡಲಾಗಿದೆ (15.9.2010))

5. ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರುಗಳ ಅಹವಾಲನ್ನು ಆಲಿಸಿದ ತರುವಾಯ, ಈ ನ್ಯಾಯಾಲಯವು, ಉದ್ಯೋಗದಾತ ಕಂಪನಿಗೆ ಔಪಚಾರಿಕ ಮಾಹಿತಿ ಅಥವಾ ನೋಟಿಸನ್ನು ನೀಡಿದ ತರುವಾಯ, ಈ ಪ್ರಕರಣದಲ್ಲಿನ ಸಂಧಾನದ ನಡಾವಳಿಗಳು ಯಾವುದೇ ರೀತಿಯಲ್ಲಿ 17.01.2012ನೇ ದಿನಾಂಕದ ಪ್ರಶ್ನಿತ ಹಿಂಬರಹ ಅನುಬಂಧ–ಬಿ ಯು ನಿರರ್ಥಕವಾಗಿರುವುದಿಲ್ಲವೆಂಬ ಅಭಿಪ್ರಾಯದ ಆಪಾದನೆಯು ವೈಫಲ್ಯವಾಗಿದ್ದು, ಇದರ ಮೂಲಕ ಕಾರ್ಮಿಕ ಆಯುಕ್ತರು ಮಾತ್ರವೇ ಕಾರ್ಮಿಕ ನ್ಯಾಯಾಲಯಕ್ಕೆ ಹೋಗಲು ಕಾರ್ಮಿಕರನ್ನು ನಿರ್ದೇಶಿಸುತ್ತಾರೆಂದು ಅಭಿಪ್ರಾಯಪಡುತ್ತದೆ. ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ 2ಎ ಪ್ರಕರಣದ ಸ್ಪಷ್ಟ ಉಪಬಂಧಗಳ ಹಿನ್ನೆಲೆಯಲ್ಲಿ, ಗುತ್ತಿಗೆ ಆಧಾರಿತ ಉದ್ಯೋಗಿ ಅಥವಾ ಕಾರ್ಮಿಕ ಅಥವಾ ಅನ್ಯಥಾ ಯಾವುದೇ ರೀತಿಯ ಉದ್ಯೋಗಿಯನ್ನು ಸೇವೆಯಿಂದ ಬಿಡುಗಡೆಗೊಳಿಸಿದ, ಉದ್ಯೋಗದಿಂದ ತೆಗೆದುಹಾಕಿದ, ಪದಚ್ಯುತಿಗೊಳಿಸಿದ ಅಥವಾ ವಜಾಗೊಳಿಸಿದ ಸಂದರ್ಭಗಳಲ್ಲಿ, ಮೊದಲು ಸಂಧಾನಾಧಿಕಾರಿಯನ್ನು ಭೇಟಿ ಮಾಡುವುದು ಕಡ್ಡಾಯವಾಗಿರುವುದಿಲ್ಲ ಅಥವಾ ಉದ್ಯೋಗದಾತ ಕಂಪನಿ ಮತ್ತು ಉದ್ಯೋಗಿ/ಕಾರ್ಮಿಕರ ನಡುವೆ ಅಂಥ ಸಂಧಾನದ ಮಾತುಕತೆಯನ್ನು ನಡೆಸುವುದು ಸಂಧಾನಾಧಿಕಾರಿಗೆ ಕಡ್ಡಾಯವಾಗಿರುವುದಿಲ್ಲ ಹಾಗೂ

ಇಂಥ ಸಂದರ್ಭಗಳಲ್ಲಿ ಇವರು, ಇದನ್ನು ಸಕ್ಷಮ ಕಾರ್ಮಿಕ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ನ್ಯಾಯ ನಿರ್ಣಯಿಸಬೇಕಾದ ಅಗತ್ಯವಿರುವ ಕಾನೂನಿನ ಕಲ್ಪನೆಯ ಮೂಲಕ ಕೈಗಾರಿಕಾ ವಿವಾದವೆಂದು ಪರಿಗಣಿಸಿದಲ್ಲಿ ಮಾತ್ರವೇ ಇದನ್ನು ಉಲ್ಲೇಖಿಸಬಹುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಪ್ರಕರಣದಲ್ಲಿ ನ್ಯಾಯದ ವೈಫಲ್ಯವುಂಟಾಗಿರುವುದಿಲ್ಲ ಹಾಗೂ ಉದ್ಯೋಗದಾತ ಕಂಪನಿಯು ಕೈಗಾರಿಕಾ ವಿವಾದಗಳು (ಕರ್ನಾಟಕ) ನಿಯಮಗಳು, 1957ರ 10ನೇ ನಿಯಮದ ಮೇರೆಗೆ ಸಂಧಾನಾಧಿಕಾರಿಯು ನೋಟೀಸನ್ನು ನೀಡಿಲ್ಲವೆಂಬ ಕಾರಣವನ್ನು ಮುಂದಿಟ್ಟ ಆಧಾರದ ಮೇಲೆ ಪ್ರಶ್ನಿತ ಹಿಂಬರಹವನ್ನು ನಿರಾಕರಿಸಲು ಹಕ್ಕುಳ್ಳದ್ದಾಗಿರುವುದಿಲ್ಲ. ಕಾರ್ಮಿಕ ನ್ಯಾಯಾಲಯದ ಎದುರು ಇದರ ವಾದವನ್ನು ಸಮರ್ಥಿಸಿಕೊಳ್ಳುವ ಅವಕಾಶವನ್ನು ಅದು ಹೊಂದಿರುತ್ತದೆ.

6. ಹಾಗಾಗಿ ಉದ್ಯೋಗದಾತ ಕಂಪನಿಯು ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲದಿರುವುದು ಕಂಡುಬರುತ್ತದೆ ಹಾಗೂ ವಜಾಗೊಳಿಸಲು ತಕ್ಕದ್ದಾಗಿರುತ್ತದೆ. ತದನುಸಾರವಾಗಿ, ಅರ್ಜಿಯನ್ನು ವಜಾಗೊಳಿಸಲಾಗಿದೆ. ಯಾವುದೇ ವೆಚ್ಚಗಳಿರುವುದಿಲ್ಲ.

---